UASB LIBRARY
Newspaper Clippings
Pg .1 Wednesday 21-07-2021 Jai Kisan



ಕೃಷಿ ವಿವಿ ಪ್ರವೇಶಕ್ಕೆ ಸರಳ ಮಾರ್ಗ

ಪ್ರಾಯೋಗಿಕ ಪರೀಕ್ಷೆ ರದ್ದು | ಅಂಕಗಳ ಮಾನದಂಡವಿಲ್ಲ

■ ಜಗನ್ನಾಥ ಆರ್.ದೇಸಾಯಿ ರಾಯಚೂರು
jagannath.r@timesgroup.com

ಕೃಷಿ, ತೋಟಗಾರಿಕೆ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ಕೃಷಿಕರ ಕೋಟಾದಡಿ ಪ್ರವೇಶಕ್ಕೆ ಆಯೋಜಿಸುತ್ತಿದ್ದ ಪ್ರಾಯೋಗಿಕ ಪರೀಕ್ಷೆಯನ್ನು ಈ ಬಾರಿ ರದ್ದುಗೊಳಿಸಿದ ಬೆನ್ನಲ್ಲೇ ಹೊಸ ಪ್ರವೇಶ ಪದ್ಧತಿ ಅನುಸರಿಸಲು ರಾಜ್ಯ ಸರಕಾರ ಮಾರ್ಗಸೂಚಿ ಬಿಡುಗಡೆಗೊಳಿಸಿದೆ.

ಕೃಷಿಕರು ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಸೀಟು ಮೀಸಲಾತಿ ಪ್ರಮಾಣವನ್ನು ಶೇ.50ಕ್ಕೆ ಹೆಚ್ಚಿಸಲಾಗಿದೆ. ಈ ಕೋಟಾದಡಿ ಬಿಎಸ್ಸಿ ಕೃಷಿ, ಪಶು ಮತ್ತು ಮೀನುಗಾರಿಕೆ, ತೋಟಗಾರಿಕೆ ಸ್ನಾತಕ ಪದವಿಗೆ ಪ್ರವೇಶ ಪಡೆಯಲು ಈ ಹಿಂದೆ ಕೃಷಿ ವಿವಿಗಳು ನಡೆಸುವ ಪ್ರಾಯೋಗಿಕ ಪರೀಕ್ಷೆಗಳಿಗೆ ಹಾಜರಾಗುವುದು ಕಡ್ಡಾಯವಾಗಿತ್ತು. ಇಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿ ತಯಾರಿಸಿ ಪ್ರವೇಶ ನೀಡಲಾಗುತ್ತಿತ್ತು.

ಪರೀಕ್ಷೆ ನಡೆಸಲಾಗದ ಪರಿಸ್ಥಿತಿ:ಕೋವಿಡ್ ಹಿನ್ನೆಲೆಯಲ್ಲಿ ಈ ವರ್ಷ ಪ್ರಾಯೋಗಿಕ ಪರೀಕ್ಷೆ ನಡೆಸಲು ಸಾಧ್ಯವಿಲ್ಲದ ಸ್ಥಿತಿಯಿದೆ ಎಂದು ವಿವಿಗಳು ಸರಕಾರಕ್ಕೆ ದೂರಿದ್ದವು. ಈ ದೂರು ಆಧರಿಸಿ, ಪ್ರಸಕ್ತ ವರ್ಷ ಪ್ರಾಯೋಗಿಕ ಪರೀಕ್ಷೆ ರದ್ದುಗೊಳಿಸಲಾಗಿದೆ ಎಂದು ಸರಕಾರದ ಕೃಷಿ ಇಲಾಖೆಯ ಉಪಕಾರ್ಯದರ್ಶಿ ರಫಿ ಅಹ್ಮದ್ ಎಂ.ಎಸ್. ಅವರು, ಜು.19 ರಂದು ಆದೇಶ ಹೊರಡಿಸಿದ್ದಾರೆ. ಕೃಷಿಕರ ಕೋಟಾದಡಿ ಪ್ರವೇಶ ನೀಡಲು ಒಟ್ಟು ನಾಲ್ಕು ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಈ ಮಾರ್ಗಸೂಚಿ ಆಧರಿಸಿ, ಸ್ನಾತಕ ಪದವಿಗೆ ಪ್ರವೇಶ ನೀಡುವಂತೆ ಆದೇಶದಲ್ಲಿ ಸೂಚಿಸಲಾಗಿದೆ.



ಹೊಸ ಮಾರ್ಗಸೂಚಿ

- ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳನ್ನು ಸ್ಕ್ಯಾನ್‌ಮಾಡಿ ಆಯಾ ವಿವಿ ವ್ಯಾಪ್ತಿಯ ಸಂಬಂಧಿಸಿದ ವಿವಿಯ ವೆಬ್ ಸೈಟ್‌ಗೆ ಆನ್‌ಲೈನ್ ಮುಖಾಂತರ ಅಪ್‌ಲೋಡ್ ಮಾಡಬೇಕು.
- ದಾಖಲಾತಿಗಳ ಆಧರಿಸಿ ಅರ್ಹತೆ ಪಡೆಯುವ ಅಭ್ಯರ್ಥಿಗಳ ಪ್ರತ್ಯೇಕ ಪಟ್ಟಿಯನ್ನು ವಿವಿಗಳು ತಯಾರಿಸಬೇಕು.
- ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕಳಿಸಿಕೊಡಬೇಕು.
- ಪರೀಕ್ಷಾ ಪ್ರಾಧಿಕಾರವು ಮೆರಿಟ್ ಪಟ್ಟಿ ಪ್ರಕಟಿಸಲಿದೆ.
- ಈ ಪಟ್ಟಿ ಆಧರಿಸಿಯೇ ಪ್ರಸಕ್ತ ವರ್ಷ ಕೃಷಿಕರ ಕೋಟಾದಡಿ ಪ್ರವೇಶ ನೀಡಲಾಗುತ್ತದೆ.
- ಕೃಷಿಕರ ಕೋಟಾದಡಿ ಪ್ರವೇಶ ಪಡೆಯಲು ಈ ಬಾರಿ ಯಾವುದೇ ಅಂಕಗಳ ಮಿತಿ ನಿಗದಿಪಡಿಸಿಲ್ಲ

ಕೃಷಿಕರು ಹಾಗೂ ಕೃಷಿ ಕಾರ್ಮಿಕರ ಕೋಟಾದಡಿ ಸ್ನಾತಕ ಪದವಿ ಪ್ರವೇಶಕ್ಕೆ ಪ್ರಾಯೋಗಿಕ ಪರೀಕ್ಷೆಯನ್ನು ಸರಕಾರ ರದ್ದುಗೊಳಿಸಿದೆ. ಪರ್ಯಾಯ ಮಾರ್ಗಸೂಚಿ ಹೊರಡಿಸಿ ಪ್ರವೇಶ ಪ್ರಕ್ರಿಯೆಗೆ ಚಾಲನೆ ನೀಡಲು ಸೂಚನೆ ಬಂದಿದೆ.

-ಡಾ.ಕೆ.ಎನ್.ಕಟ್ಟಿಮನಿ ಕುಲಪತಿಗಳು, ಕೃಷಿ ವಿಜ್ಞಾನಗಳ ವಿವಿ, ರಾಯಚೂರು

21-07-2021
Vk Pg 09

UASB LIBRARY

Newspaper Clippings

Pg .2 Jai Kisan Wednesday 21-07-2021

ಹಣ್ಣಿನ ಸಸಿ ಮಾರಾಟಕ್ಕೆ ಮಾಲ್ ರೀತಿ ಮಳಿಗೆ!

ನಗರದಲ್ಲಿ ತೋಟಗಾರಿಕಾ ಸಂಶೋಧನಾ ಸಂಸ್ಥೆ ಸಿದ್ಧತೆ | 1000 ಚದರಡಿ ಪ್ರದೇಶದಲ್ಲಿ ಮಳಿಗೆ ನಿರ್ಮಾಣ | 15 ಮಾದರಿ ಸಸಿಗಳ ಮಾರಾಟ ಮಾಲ್ ಮಾದರಿಯಲ್ಲೇ ಟ್ರಾಲಿಗಳ ವ್ಯವಸ್ಥೆ | ಮಳಿಗೆಯಲ್ಲಿ ಒಬ್ಬರಿಗೆ ಗರಿಷ್ಠ 5 ಸಸಿ ಖರೀದಿಗೆ ಅವಕಾಶ | ಆರ್ಡರ್ ಮಾಡಿದರೆ ಹೆಚ್ಚಿನ ಗಿಡ

• **ರಮೇಶ್ ಬನ್ನಿಕುಪ್ಪೆ**

ಕನ್ನಡಪ್ರಭ ವಾರ್ತೆ ಬೆಂಗಳೂರು

ದಿನಸಿ, ಬಟ್ಟೆ ಸೇರಿದಂತೆ ಅಗತ್ಯವಸ್ತುಗಳ ಖರೀದಿಗೆ ಶಾಪಿಂಗ್ ಮಳಿಗೆಗಳಿರುವಂತೆ ಹಣ್ಣಿನ ಸಸಿಗಳ ಮಾರಾಟಕ್ಕೂ ವಿಶೇಷ ಮಳಿಗೆಯೊಂದನ್ನು ಪ್ರಾರಂಭಿಸಲು ಬೆಂಗಳೂರಿನ ಹೆಸರಘಟ್ಟದ ಭಾರತೀಯ ತೋಟಗಾರಿಕಾಸಂಶೋಧನಾ ಸಂಸ್ಥೆ (ಐಐಎಚ್ಆರ್) ಮುಂದಾಗಿದೆ.

ಬೆಂಗಳೂರು ನಗರದ ಹೊರವಲಯದಲ್ಲಿ ಇದೇ ಮೊದಲ ಬಾರಿಗೆ ಸುಮಾರು ಒಂದು ಸಾವಿರ ಚದರಡಿ ಪ್ರದೇಶದಲ್ಲಿ ಮಳಿಗೆ ಪ್ರಾರಂಭಿಸಲಾಗುತ್ತಿದೆ. ಈ ಪ್ರದೇಶದಲ್ಲಿ ಸುಮಾರು 15ಕ್ಕೂ ಹೆಚ್ಚು ಮಾದರಿಯ ಸಸಿಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಇಲ್ಲಿಗೆ ಬರುವ ರೈತರು ಮತ್ತು ಸಾರ್ವಜನಿಕರು ಮಾಲ್‌ಗಳ ಮಾದರಿಯಲ್ಲಿ ಟ್ರಾಲಿಯ ಮೂಲಕ ಸಸಿಗಳನ್ನು ಖರೀದಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಒಂದೇ ವಿಭಾಗದಲ್ಲಿ ಎಲ್ಲ ಸಸಿ: ಅಲೆಯುವ ಅಗತ್ಯವಿಲ್ಲ

ಈವರೆಗೂ ಪಾಲಿಹೌಸ್ ಮತ್ತು ತೋಟಗಳಲ್ಲಿಯೇ ಸಸಿಗಳ ಖರೀದಿಗೆ ಅವಕಾಶವಿತ್ತು. ಒಂದೊಂದು ಜಾತಿಯ ಸಸಿಗೆ ಒಂದೊಂದು ಭಾಗಕ್ಕೆ ಹೋಗಬೇಕಾಗಿತ್ತು. ಆದರೆ, ಇದೀಗ ಒಂದೇ ಭಾಗದಲ್ಲಿ ಎಲ್ಲ ರೀತಿಯ ಹಣ್ಣಿನ ಸಸಿಗಳ ಖರೀದಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಈಗಾಗಲೇ ಐಐಎಚ್ಆರ್ ಸಂಸ್ಥೆ 54 ನಾನಾ ತೋಟಗಾರಿಕಾ ಬೆಳೆಗಳನ್ನು ಅಭಿವೃದ್ಧಿ ಪಡಿಸಿದೆ. 15 ರೀತಿಯ ಹಣ್ಣುಗಳ ಸಸಿಗಳಿರಲಿದ್ದು ಖರೀದಿಗೆ ಅವಕಾಶವಿರಲಿದೆ.



ಇದೊಂದು ಹಣ್ಣಿನ ಸಸಿಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಯಾಗಿದ್ದು ಇದರ ನಿರ್ಮಾಣ ಕಾರ್ಯ ಆರಂಭವಾಗಿದ್ದು, ಈ ವೇಳೆಗೆಲ್ಲಾ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಕೊರೋನಾ ಕಾರಣದಿಂದ ವಿಳಂಬವಾಗುತ್ತಿದ್ದು,ಪ್ರಸಕ್ತ ವರ್ಷದ ಅಂತ್ಯದೊಳಗೆ ಸಾರ್ವಜನಿಕರಿಗೆ ಮುಕ್ತವಾಗಲಿದೆ.

ಸಾವಿರ ಚದರಡಿ ವಿಸ್ತೀರ್ಣ: ಒಂದು ಸಾವಿರ ಚದರಡಿ ಪ್ರದೇಶದಲ್ಲಿ ಮಾಲ್ ನಿರ್ಮಾಣಗೊಳ್ಳುತ್ತಿದೆ. ಇದೊಂದು ತೆರೆದ ಆವರಣದಂತಿರಲಿದ್ದು, ಸುತ್ತಲೂ ತಡೆಗೋಡೆಯಿರಲಿದೆ. ಒಳಾಂಗಣದಲ್ಲಿ ನಾನಾ ಪ್ರದರ್ಶನಗೊಳ್ಳಲಿವೆ. ಪ್ರಮುಖವಾಗಿ ಮಾವು, ಸೀಬೆ, ಹಲಸು,ನೇರಳೆ, ಸೀತಾಫಲ ಮತ್ತಿತರ ಹಣ್ಣಿನ ಸಸಿಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಇರಲಿದೆ. ಇವುಗಳನ್ನು ನೋಡುವುದರ ಜೊತೆಗೆ ಖರೀದಿಸಲೂ ಅವಕಾಶವಿರಲಿದೆ. ಆ ಸಸಿಗಳ ಕುರಿತ ಮಾಹಿತಿ ವಿವರಗಳನ್ನೂ ಅಳವಡಿಸಲಾಗುವುದು ಎಂದು ಐಐಎಚ್ಆರ್‌ನ ಪ್ರಧಾನ ವಿಜ್ಞಾನಿಯೂ ಆದ ಹಣ್ಣಿನ ಸಸಿಗಳ ಮಾರಾಟ ಘಟಕದ ನೋಡಲ್ ಅಧಿಕಾರಿ ಡಾ.ಯೋಗೇಶ್ ವಿವರಿಸಿದ್ದಾರೆ.

ಮಾಲ್‌ಗಳಿಗೆ ಹೋಗಿ ಟ್ರಾಲಿಯಲ್ಲಿ ಮನೆಗೆ ಬೇಕಾದ ಸಾಮಗ್ರಿಗಳನ್ನು ಆಯ್ಕೆ ಮಾಡಿ ಖರೀದಿಸುವಂತೆ ಈ ಕೇಂದ್ರದಲ್ಲಿ ವಿವಿಧ ಹಣ್ಣಿನ ತಳಿಗಳ ಸಸಿಗಳನ್ನು ಖರೀದಿಸಬಹುದು. ಪ್ರದರ್ಶನ ಕೇಂದ್ರದಲ್ಲಿ ಒಬ್ಬರು ಗರಿಷ್ಠ 5 ಗಿಡಗಳನ್ನು ಖರೀದಿಸಬಹುದು. ಹೆಚ್ಚಿನ ಪ್ರಮಾಣದಲ್ಲಿ ಸಸಿಗಳು ಬೇಕಿದ್ದರೆ ಸ್ಥಳದಲ್ಲೇ ಬುಕ್ ಮಾಡುವುದಕ್ಕೆ ಅವಕಾಶ ಇರಲಿದ್ದು, ತರಿಸಿಕೊಡಲಾಗುವುದು ಎಂದು ತಿಳಿಸಿದ್ದಾರೆ.

> **ಹಣ್ಣಿನ ಸಸಿಗಳ ಮಾಲ್ ನಿರ್ಮಾಣ ಕಾರ್ಯ ಪ್ರಾರಂಭವಾಗಿದ್ದು, ಈ ವೇಳೆಗೆ ಸಿದ್ಧವಾಗಬೇಕಾಗಿತ್ತು. ಆದರೆ, ಕೊರೋನಾದಿಂದ ಪೂರ್ಣಗೊಂಡಿಲ್ಲ. ಈ ವರ್ಷದ ಅಂತ್ಯದ ವೇಳೆಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು.**
>
> • **ಡಾ.ಯೋಗೇಶ್** ಪ್ರಧಾನ ವಿಜ್ಞಾನಿ, ಹಣ್ಣಿನ ಸಸಿಗಳ ಮಾರಾಟ ಘಟಕದ ನೋಡಲ್ ಅಧಿಕಾರಿ

ಬಗೆಯ ಸಸಿಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ ಪ್ರತ್ಯೇಕ ವಿಭಾಗಗಳಿರುತ್ತವೆ ಎಂದು ಐಐಎಚ್ಆರ್ ವಿಜ್ಞಾನಿಗಳು ಮಾಹಿತಿ ನೀಡಿದ್ದಾರೆ.

ಯಾವ ಯಾವ ಸಸಿಗಳಿರಲಿವೆ?: ಐಐಎಚ್ಆರ್ ಅಭಿವೃದ್ಧಿ ಪಡಿಸಿದ ವಿವಿಧ ಹಣ್ಣಿನ ಸಸಿಗಳು ಇಲ್ಲಿ

21-07-2021 Kp Pg 05

ಬೆಳೆ ವಿಮೆಗೂ ನಾಮಿನಿ

ಬೆಂಗಳೂರು: ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಬೆಳೆ ವಿಮೆ ಮಾಡಿಸಿಕೊಳ್ಳುವಾಗ ಇನ್ಮುಂದೆ ರೈತನ ಜೊತೆ ಕುಟುಂಬದ ನಾಮಿನಿಯನ್ನೂ ಮಾಡಿಸಿಕೊಳ್ಳಬೇಕು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ವಿಮಾ ಕಂಪೆನಿಗಳಿಗೆ ಸೂಚಿಸಿದ್ದಾರೆ. ಬೆಳೆ ವಿಮೆ ಸಂಬಂಧ ಕೃಷಿ, ತೋಟಗಾರಿಕಾ ಇಲಾಖಾಧಿಕಾರಿಗಳ ಜೊತೆ ಸಭೆ ನಡೆಸಿದ ನಂತರ ಸುದ್ದಿಗಾರರ ಜತೆ ಮಾತನಾಡಿ, ಇನ್ಮುಂದೆ ವಿಮಾ ಕಂಪೆನಿಗಳು ರೈತರಿಂದ ವಿಮೆ ಮಾಡಿಸಿ ಕೊಳ್ಳುವಾಗ ನಾಮಿನಿಯ ಹೆಸರು ಪಡೆಯಬೇಕೆಂದು ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು. ಅಲ್ಲದೇ ಫಸಲ್ ಬೀಮಾ ಯೋಜನೆ ಮಾಡಿಕೊಳ್ಳುವ ವಿಮಾ ಕಂಪೆನಿಗಳು ಕೃಷಿ ಇಲಾಖೆಯಲ್ಲಿ ಕಚೇರಿ ಮಾಡಿಕೊಳ್ಳದೇ ಈ ಹಿಂದೆ ಸೂಚಿಸಿದಂತೆ ಪ್ರತಿ ತಾಲೂಕಿನಲ್ಲಿ ಪ್ರತ್ಯೇಕ ಕಚೇರಿ ತೆರೆಯಬೇಕು.ಅಲ್ಲದೇ ಕಚೇರಿ ತೆರೆದ ಪ್ರದೇಶದ ಮಾಹಿತಿಯ ಜಿಪಿಎಸ್ ಲಿಂಕ್ ಕೃಷಿ ಇಲಾಖೆಗೆ ನೀಡಲು ತಿಳಿಸಲಾಗಿದೆ ಎಂದರು.

21-07-2021 Uv Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in